

ಏನೂ ಇಲ್ಲದೆ, ಕೋರ್ಟಿನ ಆದೇಶವೂ ಇಲ್ಲದೆ, ಯಾವ ದಾಖಲೆಯೂ ಇಲ್ಲದೆ ಇಪ್ಪತ್ತೆರಡು ವರ್ಷಗಳನ್ನು ಜೈಲಿನಲ್ಲಿ ಕಳೆದ ಒಬ್ಬ ಕೈದಿಯ ದುರಂತ ಕಥೆ ವಿಶ್ವಾದ್ಯಂತ ಸುದ್ದಿಯಾಗಬೇಕಿತ್ತು. ಆದರೆ ಆಗಲಿಲ್ಲ. ಪತ್ರಕರ್ತ ಗೆಳೆಯರು ಇಸ್ತಿರಿ ಅಪ್ಪಣ್ಣನನ್ನು ರಿಕ್ಷಾದಲ್ಲಿ ಕರೆದುಕೊಂಡು ಹೋಗಿ ಕೊಳಂಬೆಯಲ್ಲಿದ್ದ ತಮ್ಮ ಹಳೆಯ ಗುಡಿಸಲು ಇದ್ದ ಜಾಗಕ್ಕೆ ತಂದು ಇಳಿಸಿದರು. ಈಗ ಆ ಪ್ರದೇಶಕ್ಕೆ ಡಾಲರ್ ಹೆವೆನ್ ಬ್ಲಾಕ್ ಎಂದು ಹೆಸರು. ಸರಳಾಯರು ಮತ್ತು ಮಿತ್ರರು ಅಪ್ಪಣ್ಣನನ್ನು ಕರೆದುಕೊಂಡು ಬಂದ ಕಾಲದಲ್ಲಿಯೇ ಅದನ್ನು ಶ್ರೀಮಂತರ ವಸತಿ ಪ್ರದೇಶವಾಗಿ ರೂಪಿಸುವ ಯೋಜನೆ ಪ್ರಾರಂಭವಾಗಿತ್ತು; ಆದರೆ ಹೆಸರು ಬದಲಾವಣೆ ಇತ್ಯಾದಿ ಆಗಿರಲಿಲ್ಲ.

ಪತ್ರಕರ್ತರ ಜತೆಗೆ ಇಸ್ತಿರಿ ಅಪ್ಪಣ್ಣನೂ ತಾನು ಇಪ್ಪತ್ತೆರಡು ವರ್ಷಗಳ ಹಿಂದೆ ಬಿಟ್ಟುಹೋಗಿದ್ದ ಮನೆಯನ್ನು ವಿಷಾದದಿಂದ ನೋಡಿದ.

ಇಸ್ತಿರಿ ಅಪ್ಪಣ್ಣನ ಮನೆ ಇಪ್ಪತ್ತು ವರ್ಷಗಳ ಹಿಂದೆಯೇ ಪಟ್ಟಣದಲ್ಲಿ ಉಳಿದಿದ್ದ ಏಕೈಕ ಮುಳಿಹುಲ್ಲಿನ ಮನೆಯಾಗಿತ್ತು. ಸುಮಾರು ಐದು ಸೆಂಟ್ಸ್ ಜಾಗದಲ್ಲಿ ಇದ್ದ ಅವರ ಗುಡಿಸಲಿನ ಸುತ್ತ ಕೋಲುಗಳನ್ನು ಊರಿ, ಬೇಲಿಗಿಡಗಳನ್ನು ನೆಟ್ಟು, ಮಣ್ಣಿನ ದಂಡೆಯನ್ನು ಕಟ್ಟಿ ಕಂಪೌಂಡನ್ನು